ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ಏನಾಗಿದೆ ಎಂದರೆ, ಹೋದ ಏಪ್ರಿಲ್ ತಿಂಗಳಿನಲ್ಲಿ ಸಿ.ಬಿ.ಐ. ತನಿಖೆ ಶುರುವಾಗಿತ್ತು. ಈ ವರ್ಷದ ಏಪ್ರಿಲ್ ಬಂದರೂ ತನಿಖೆ ಮುಗಿದಿಲ್ಲ. ತನಿಖೆ ಆರಂಭಿಸಿ ಒಂದು ವರ್ಷವಾದರೂ ತನಿಖೆ ಮುಗಿಯದಿರುವುದರಿಂದ ಒಂದು ರೀತಿಯ ಅನುಮಾನಗಳು ಮೂಡಿ ಬರುತ್ತಿವೆ.

ಅಧ್ಯಕ್ಷರು:- ನಾವು ಈ ಸಭೆ ಸೇರಿದ ದಿವಸವೇ ಸನ್ಮಾನ್ಯ ಮುಖ್ಯಮಂತ್ರಿಗಳ ವತಿಯಿಂದ ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆಸಿ ಅವರ ಮೇಲೆ ಒತ್ತಡ ಹಾಕುವ ಕೆಲಸವನ್ನೂ ಸಹ ನಾವು ಮಾಡೋಣ.

4.50 ಪಿಎಂ

ಈ. ಬೀದರ್‌ನ ಕೋಳಾರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಮಿಕಲ್ಸ್ . ಫ್ಯಾಕ್ಟರಿಗಳ ಪ್ರಾರಂಭ.

ಶ್ರೀ ಸೈಯದ್ ಜುಲ್ಫಿಕಾರ್ ಅಲಿ ಹಶ್ಮಿ (ಬೀದರ್):- ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಬೀದರ್ ಕೋಳಾರ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಮಿಕಲ್ಸ್ ಫ್ಯಾಕ್ಟರಿ ಇದೆ. ಕೋಳಾರ ಇಂಡಸ್ಟ್ರೀಯಲ್ ಏರಿಯಾದಲ್ಲಿ ಎಂತಹ ಕೆಮಿಕಲ್ ಫ್ಯಾಕ್ಟರಿ ಎಂದರೆ, ಅದು ಒಂದು ದಿನ ಭೂಪಾಲ್ ಟ್ರಾ ಜಡಿ ಆಗುತ್ತದೆ. ಇದರ ಬಗ್ಗೆ ಮಾತುಕತೆ ಆಗಿದೆ, ಮೇಲ್ಮನೆಯಲ್ಲಿ ಮಾತುಕತೆ ಆಗಿದೆ, ಅದರ ಮೇಲೆ ಶ್ರೀಮಾನ್ ಪೂಜಾರಿಯವರ ಅಧ್ಯಕ್ಷತೆಯಲ್ಲಿನ ವಿಷಯ ಸಮಿತಿ ಅಲ್ಲಿಗೆ ಹೋಯಿತು. ಆ ಕಮಿಟಿ ರಿಪೋರ್ಟ್ ಕೊಟ್ಟಿದೆ. ಇದು ಕೆಮಿಕಲ್ ಫ್ಯಾಕ್ಟರಿ, ಟ್ರೀಟ್‌ಮೆಂಟ್ ಪ್ಲಾ ಂಟ್ ಹಾಕದಿದ್ದರೆ, ಇದು ಕ್ಲೋಸ್ ಆಗಬೇಕು ಇದು ಈ ಫ್ಯಾಕ್ಟರಿ ಅಲ್ಲಿ ಓಪನ್ ಆಗಿದೆ. ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ, ದನಕರು ಸಾಯುತ್ತೀವೆ, ಫ್ಯಾಕ್ಟರಿ ಓಪನ್ ಮಾಡಿದ್ದಾರೆ, ಮೊನ್ನೆ ಪಲ್ಯೂಷನ್ ಮಿನಿಸ್ಟರ್ ಬೀದರ್‌ಗೆ ಬಂದಾಗ ಓಪನ್ ಮಾಡಿದ್ದಾರೆ. ಲೋಕಲ್ ಎಮ್.ಎಲ್.ಎ. ಗಳಾದ ನಮಗೆ ಕರೆಯದೆ, ಎಲ್ಲಾ ಪೋಲೀಸ್ ಆಡಳಿತಾಧಿಕಾರಿಗಳ ಜೊತೆ, ಜಿಲ್ಲಾಧಿಕಾರಿಗಳ ಜೊತೆ ಕೂರಿಸಿ ಫಂಕ್ಷನ್ ಮಾಡಿ ಫೌಂಡೇಷನ್ ಹಾಕಿ ಬಂದಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಸುಮಾರು 14 ಹಳ್ಳಿಗಳು ಇದಕ್ಕೆ ಎಫೆಕ್ಟ್ ಆಗಿದೆ. ಕುಡಿಯುವುದಕ್ಕೆ ನೀರು ಇಲ್ಲ.

ಅಧ್ಯಕ್ಷರು:- ನಿಮ್ಮ ಅಬ್‌ಜೆಕ್ಷನ್ ಅಲ್ಲಿ ಫ್ಯಾಕ್ಟರಿ ಆಗಬಾರದು ಎಂದೋ ಅಥವಾ ನಿಮ್ಮನ್ನು ಕರೆಯಲಿಲ್ಲವೆಂದೋ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸದನ ಸಮಿತಿ ಹೋಗಿತ್ತು, ಆ ಸದನ ಸಮಿತಿಯವರು ಹಿಂದೆ ಏನು ಸಲಹೆ ಮಾಡಿದ್ದರೆಂದರೆ, ಅಲ್ಲಿರತಕ್ಕಂತಹ ಕೆಲವು ಫ್ಯಾಕ್ಟರಿಗಳನ್ನು ಕ್ಲೋಸ್ ಮಾಡಬೇಕು, ಏಕೆಂದರೆ ಅಕ್ಕಪಕ್ಕದ ಹಳ್ಳಿಗಳಲ್ಲಿ ಬಾವಿಗಳು ಇವೆ, ಆ ಬಾವಿಗಳಲ್ಲಿ ಕುಡಿಯುವುದಕ್ಕೆ ನೀರಿನ ಅನುಕೂಲ ಇಲ್ಲ. ಪಲ್ಯೂಷನ್ ಆಗುತ್ತಿದೆ. ಎಂದು ಈ ಸದನ ಸಮಿತಿ ವರದಿ ಕೊಟ್ಟಿದೆ. ಮೊದಲು ಆ ವರದಿ ಮೇಲೆ ಕ್ಲೋಸ್ ಆಗಿತ್ತು, ಆದರೆ ಮತ್ತೆ ಇವತ್ತು ಪುನಃ ಅವರು ವಿಸಿಟ್ ಮಾಡಿ

ಕೆಲವು ಜನರಿಗೆ ಕರೆದುಕೊಂಡು ಹೋಗಿ ಫ್ಯಾಕ್ಟರಿಗಳಿಗೆ ವಿಸಿಟ್ ಮಾಡಿದ ಮೇಲೆ ಎಲ್ಲಾ ಐದಾರು ಪಲ್ಯೂಟೆಡ್ ಫ್ಯಾಕ್ಟರೀಸ್ ಏನು ಇದೆ ಅವುಗಳನ್ನೂ ಪುನಃ ಓಪನ್ ಮಾಡಿದ್ದಾರೆ. ಆದ್ದರಿಂದ ಇವತ್ತು ಆ ಜನರಿಗೆ ಕುಡಿಯುವುದಕ್ಕೆ ಈ ಸದನದ ಸಮಿತಿ ರಿಪೋರ್ಟ್ ಇದ್ದಾಗ್ಯೂ ಕೂಡ ಅದರ ಮೇಲೆ ನಿರ್ಣಯ ತೆಗೆದುಕೊಳ್ಳುವುದು ಬಿಟ್ಟು ಮಂತ್ರಿಗಳು ನೇರವಾಗಿ ಹೋಗಿ ಅವರೇ ನೀವು ಓಪನ್ ಮಾಡಿ ಎಂದು ಫ್ಯಾಕ್ಟರಿಯವರೆಗೆ ಹೇಳಿ ಆ ಎಲ್ಲಾ ಕಾರ್ಖಾನೆಗಳನ್ನು ಪ್ರಾರಂಭ ಮಾಡಿಸಿದ್ದಾರೆ. ಇದು ಸರಿಯಲ್ಲ ಅದಕ್ಕಾಗಿ ಸದನದ ರಿಪೋರ್ಟ್ ಟೇಬಲ್ ಮೇಲೆ ಬಂದಿದೆ.

ಶ್ರೀ ವಿಜಯ್‌ಕುಮಾರ್ ಖಿಂಡ್ರೆ (ಭಾಲ್ಕಿ):- ಸದನ ಸಮಿತಿಯವರು ಅಲ್ಲಿ ಹೋದಾಗ ಅವರು ಇದನ್ನೆಲ್ಲಾ ಸ್ವತಃ ವೀಕ್ಷಿಸಿ ಏನು ರಿಪೋರ್ಟ್ ಕೊಟ್ಟಿದ್ದಾರೆಂದರೆ ಎಲ್ಲಿಯವರೆಗೆ ಸೆಪರೇಟ್ ಎಫ್ಲ್ಯೂಯಂಟ್ ಟ್ರೀಟ್‌ಮೆಂಟ್ ಪ್ಲಾಂಟ್ ತಯಾರಾಗುವುದಿಲ್ಲ ಅಲ್ಲಿಯವರೆಗೆ ಈ ಇಂಡಸ್ಟ್ರೀಗಳನ್ನು ಮುಚ್ಚಲೇಬೇಕೆಂದು ರಿಪೋರ್ಟ್ ಕೊಟ್ಟಿದ್ದಾರೆ. ಕಾರಣ ಅಲ್ಲಿ ಈ ಕೆಮಿಕಲ್ ಇಂಡಸ್ಟ್ರೀ ಇರತಕ್ಕಂತಹ ಏರಿಯಾದಲ್ಲಿ ಸುತ್ತ ಮುತ್ತಲು 30 ಹಳ್ಳಿಗಳಲ್ಲಿರತಕ್ಕಂತಹ ಬಾವಿಗಳಿಗೆ ಟಾಕ್ಸಿಕ್ ವೇಸ್ಟ್ ನೆಲದಲ್ಲಿ ಹರಡುತ್ತಿವೆ. ಬೇರೆ ಬೇರೆ ಹಳ್ಳಿಗಳಲ್ಲೂ ಕುಡಿಯುವ ನೀರಿನ ಬೋರ್‌ವೆಲ್‌ಗಳು, ಬಾವಿಗಳು ಇವೆ. ಅಲ್ಲಿಗೆಲ್ಲ ಟಾಕ್ಸಿಕ್ ಕೆಮಿಕಲ್ಸ್ ಹೋಗಿ ಸೇರಿದ್ದರಿಂದ, ಆ ನೀರನ್ನು ಕುಡಿದು ದನಗಳು ಸತ್ತಿವೆ, ಅಲ್ಲಿ ಕೆಲವು ಕಡೆ ಹೆಣ್ಣು ಮಕ್ಕಳ ಅಬಾರ್ಷನ್ಸ್ ಆಗಿವೆ. ಇಂತಹ ಇನ್‌ಸಿಡೆಂಟ್ಸ್‌ನ್ನೂ ಅವರು ಸ್ವತಃ ನೋಡಿ ಅವರು ಈ ತರಹ ರಿಪೋರ್ಟ್ ಕೊಟ್ಟಿದ್ದಾರೆ. ಒಂದು ಕಡೆ ಸದನ ಸಮಿತಿ ರಿಪೋರ್ಟ್ ಕೊಟ್ಟಿದೆ, ಇನ್ನೊಂದು ಕಡೆ ಆ ಫ್ಯಾಕ್ಟರೀಸ್ ಚಾಲನೆಯಲ್ಲಿವೆ. ಮತ್ತು ಮಾನ್ಯ ಹಶ್ಮಿಯವರು ಹೇಳಿದ ಹಾಗೆ ಮಂತ್ರಿಗಳು ಬಂದು ಈ ರೀತಿ ಚಾಲು ಮಾಡುವುದಾದರೆ ಆ ಜನ ಈಗ ಸರ್ಕಾರದಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ನಾಳೆ ದಿನ ಅವರು ಕಾನೂನು ತಮ್ಮ ಕೈಯಲ್ಲಿ ತೆಗೆದುಕೊಳ್ಳುವ ಪರಿಸ್ಥಿತಿ ಬರಬಹುದು. ಲಾ ಅಂಡ್ ಆರ್ಡರ್ ಸಮಸ್ಯೆ ಬರಬಹುದು, ಇದರಿಂದ ಈ ವಿಷಯವನ್ನು ತಾವು ಗಮನದಲ್ಲಿಟ್ಟುಕೊಂಡು ಸರ್ಕಾರದವರ ಮೇಲೆ ಒಂದು ಬಂಧನ ತರುವುದಕ್ಕೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ತಾವು ಈ ಇಂಡಸ್ಟ್ರೀಯನ್ನು ಕೂಡಲೇ ಬಂದ್ ಮಾಡಬೇಕು. ಅಲ್ಲಿ 30 ಹಳ್ಳಿಗಳಲ್ಲಿರತಕ್ಕಂತಹ ಜನರ ಸಮಸ್ಯೆ ಏನು ಇದೆ, ಕುಡಿಯುವ ನೀರಿನ ಸಮಸ್ಯೆ ಆದು ಏನೂ ಆಗದೆ ಇದ್ದ ಹಾಗೆ ಅವರ ಪ್ರಾಣಕ್ಕೆ ಮತ್ತು ದನಗಳ ಪ್ರಾಣಿಗಳಿಗೂ ಹಾನಿ ಆಗದೆ ಇದ್ದ ಹಾಗೆ ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಸೈಯದ್ ಜುಲ್ಫಿಕಾರ್ ಹಶ್ಮಿ:- ಸಭಾಧ್ಯಕ್ಷರೆ, ಫ್ಯಾಕ್ಟರಿ ಬಂದ್ ಮಾಡಬೇಕು. ನನ್ನ ಕ್ಷೇತ್ರದ ಪರಿಸ್ಥಿತಿ ಈ ರೀತಿ ಇದೆ. ನಮ್ಮ ಪ್ರಾಬ್ಲಮ್ ಬಹಳ ದೊಡ್ಡದು. ಫ್ಯಾಕ್ಟರಿ ಓಪನ್ ಆಗಿದೆ. ಓಪನ್ ಆಗಿ ಅವರು ಛಾಲೆಂಜ್ ಮಾಡುತ್ತಾರೆ. ಏನು ಮಾಡುತ್ತಾರೆ, ನಿಮ್ಮ ಸರ್ಕಾರ ನಿಮ್ಮ ಎಮ್.ಎಲ್.ಎ. ಎಂದು, ಅಲ್ಲಿ ಕೆಲಸ ಮಾಡುವ ಲೋಕಲ್ ಜನರೆಲ್ಲರನ್ನೂ ತೆಗೆದು ಹಾಕಿದ್ದಾರೆ. ಫ್ಯಾಕ್ಟರಿ ಮಾಲಿಕರ ಜೊತೆ ನಮ್ಮ ಮಂತ್ರಿಗಳು ಏನೇನು ಮಾಡಿದ್ದಾರೆಂದು ನಾನು ಓಪನ್ ಆಗಿ ಹೇಳುವುದಿಲ್ಲ. ನಾನು ಹೇಳಿದೆ ಬೀದರ್‌ನಲ್ಲಿ ಶಾಸಕರಿಗೆ ಜನರ ಪ್ರತಿನಿಧಿಗಳಿಗೆ ಕರೆಯಿಸಿ

ಮಾತನಾಡಿ, ಎಂದು ಹೈದರಾಬಾದಿಗೆ ಹೋಗಿ ಹೋಟೆಲ್ ಗೋಲ್ಕುಂಡ, ಫ್ಯಾಕ್ಟರಿ ಮಾಲಿಕರ ಹೋಟೆಲ್, ಅಲ್ಲಿ ಕುಳಿತು ಅವರು ಈ ಎಲ್ಲಾ ಡಿಸಿಷನ್ ಮಾಡಿದ್ದಾರೆ. ಏನೇನು ಆಗಿದೆ ಎಂದು ನಾನು ಓಪನ್ನಾಗಿ ಹೇಳುವುದಿಲ್ಲ. ಆ ಹೋಟೆಲ್‌ನಲ್ಲಿ ಪ್ರೂಫ್ ಇದೆ, ರಸೀದಿ ಇದೆ. ಮಂತ್ರಿಗಳು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ....

ಅಧ್ಯಕ್ಷರು:- ನಿಮಗೆ ರೂಲ್ಸ್ ಗೊತ್ತಿಲ್ಲ, ನೀವು ಒಬ್ಬ ಮಂತ್ರಿ ಮೇಲೆ ಅಲಿಗೇಷನ್ ಮಾಡಬೇಕಾದರೆ ನೋಟೀಸ್ ಕೊಟ್ಟು ಅವರು ಇದ್ದಾಗ ಮಾಡಬೇಕು. ನಿಮ್ಮ ಕಷ್ಟ ಏನೆಂದರೆ ರೆಪ್ರೆಸೆಂಟ್ ಮಾಡಲಿ ಎಂದು ನಿಮಗೆ ಅವಕಾಶ ಕೊಟ್ಟರೆ ನೀವು ಅಲಿಗೇಷನ್ ಮಾಡಲು ಹೋಗುತ್ತಿದ್ದೀರಿ. ಸೋಮವಾರ ಅವರು ಸದನದಲ್ಲಿರುತ್ತಾರೆ. ಸೋಮವಾರ ನೀವು ನೋಟೀಸ್ ಕೊಟ್ಟು ಏನೇನು ಹೇಳಬೇಕು ಅದನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸೈಯದ್ ಜುಲ್ಫಿಕಾರ್ ಹಶ್ಮಿ:- ಸರ್ಕಾರದವರು ಇಮ್ಮೀಡಿಯಟ್ಟಾಗಿ ಆ ಫ್ಯಾಕ್ಟರಿಗಳನ್ನು ಕ್ಲೋಸ್ ಮಾಡಬೇಕು.

ಅಧ್ಯಕ್ಷರು:- ಈಗ ಹೇಳಿದರೆ ಇಲ್ಲಿಯೇ ಬೀಗದ ಕೈ ಇದೆಯೇ, ಕ್ಲೋಸ್ ಮಾಡುವುದಕ್ಕೆ.

3. ವರದಿಯನ್ನೊಪ್ಪಿಸುವುದು

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ):- ಶ್ರೀ ಹೆಚ್.ಎಸ್. ಪ್ರಕಾಶ್, ಸದಸ್ಯರು, ಕಂದಾಯ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಗಳ ವಿಷಯ ಸಮಿತಿ ಇವರ ಪರವಾಗಿ): ಬೀದರ್‌ನ ಕೋಳಾರ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಫಾರ್ಮಸ್ಯುಟಿಕಲ್ ಮತ್ತು ಕೆಮಿಕಲ್ ಕಾರ್ಖಾನೆಗಳಿಂದ ಪರಿಸರ ಮಾಲಿನ್ಯ ಉಂಟಾಗುತ್ತಿರುವ ಬಗ್ಗೆ ಕಂದಾಯ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಗಳ ವಿಷಯ ಸಮಿತಿಯ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನು ಮಂಡಿಸಲಾಯಿತು.

ಅಧ್ಯಕ್ಷರು:- ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 4.55ಕ್ಕೆ ಮುಕ್ತಾಯೊಂಡು ಪುನಃ ದಿನಾಂಕ 17-2-97ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)